# ಭಿಕ್ಷೆ ಮತ್ತು ಬಾಯಾರಿಕೆ

ಭಿಕ್ಷಾಟನೆ ನಮ್ಮ ಅಹಂಕಾರ ನಿರಶನಗೊಳಿಸುವ ಅತ್ಯಂತ ಉತ್ತಮ ಮಾರ್ಗವೆಂದು ಅಧ್ಯಾತ್ಮ ರಂಗದಲ್ಲಿ ಭಾವಿಸಲಾಗಿದೆ. ನಮ್ಮೊಳಗಿರುವ ಜಾತಿ ಮದ, ಶ್ರೀಮಂತಿಕೆಯ ಮದ, ಯೌವ್ವನದ ಮದಗಳು ನಮ್ಮನ್ನು ಇತರರ ಬಳಿ ಯಾಚಿಸುವುದನ್ನು ತಡೆಹಿಡಿಯುತ್ತವೆ. ಅವುಗಳನ್ನು ಮೀರಿ ಅನ್ನಬೇಡಿ ತಿನ್ನುವ ಕ್ರಿಯೆಗೆ ಮೈಮನಗಳನ್ನು ಅಣಿಗೊಳಿಸಿಕೊಳ್ಳಬೇಕಾಗುತ್ತದೆ. ಆಗ ಸಮಾಜ ಭಿಕ್ಷುವಿನ ಅಂತರಂಗ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಕ್ರಿಯೆಗೆ ಹೋಗದೆ, ಅವನ ವಯಸ್ಸು, ದೇಹಿಕ ಶಕ್ತಿಗಳನ್ನು ಗಮನಿಸಿ ದುಡಿದು ತಿನ್ನದೆ ಭಿಕ್ಷೆ ಬೇಡುತ್ತಿರುವ ರೀತಿಗೆ ಹಂಗಿಸುತ್ತದೆ; ಹೀಯಾಳಿಸುತ್ತದೆ; ಅವಮಾನಿಸುತ್ತದೆ. ಈ ಹಂತದಲ್ಲಿ ವ್ಯಕ್ತಿಯ ಅಂತರಂಗದಲ್ಲಿರಬಹುದಾದ ಸ್ವಾಭಿಮಾನವು ಅಹಂಕಾರದ ರೂಪ ತಾಳಿ ಪ್ರತಿಭಟಿಸಲು ಯತ್ನಿಸುತ್ತದೆ. ಆ ಸಂದರ್ಭದಲ್ಲಿ ಜನಿಸುವ ಅಹಂಕಾರವನ್ನು ಅದುಮಿಟ್ಟುಕೊಳ್ಳುವ ಸ್ಥಿತಿಯನ್ನು ಭಿಕ್ಷಾಟನೆ ತಂದುಕೊಡಬೇಕು. ಅಂದರೆ, ಅಧ್ಯಾತ್ಮದ ಸಾಧನೆಯ ಹಾದಿಯಲ್ಲಿ ಭಿಕ್ಷಾಟನೆ ಸಂಯಮ ಕಲಿಸುವ, ನಿರ್ಗುಣಗೊಳಿಸುವ ಮುಖ್ಯವಾದ ಕಲಿಕೆಯ ಮಾರ್ಗವೆಂದು ತಿಳಿಯಬೇಕು.

ಪ್ರಕೃತಿ ತಾಯಿಯ ಇನ್ನಿತರ ಮಕ್ಕಳಾದ ಪ್ರಾಣಿಗಳು ಆಹಾರವನ್ನು ಕೂಡಿಡುವುದಿಲ್ಲ. ಅಂದಂದಿನ ಆಹಾರವನ್ನು ಅಂದಂದೇ ಸಂಪಾದಿಸಿ ಅಂದಂದೇ ತಿಂದು ನಿರಾಳವಾಗಿರುತ್ತವೆ. ನಿಜವಾದ ಭಿಕ್ಷು ತನಗೆಷ್ಟು ಆಹಾರ ಬೇಕೋ ಅಷ್ಟನ್ನು ಬೇಡಬೇಕು, ನಾಳೆಗೆ ಇಡಬಾರದು. ಕೂಡಿಡುವುದು ಅಥವಾ ನಾಳೆಗೆ ಇಡುವುದು ಆಸೆಯ ಸಂಕೇತ. ಅದು ಮತ್ತೊಬ್ಬರ ಆಹಾರವನ್ನು ಬಚ್ಚಿಟ್ಟಂಥ ಕೆಟ್ಟ ನಡೆ.

ಕಪಟ ಭಿಕ್ಷುಗಳು ಚರಿತ್ರೆಯಲ್ಲೂ ಇದ್ದರು. ಇಂದೂ ಇದ್ದಾರೆ. ಇಂಥವರು ಬುದ್ಧನ ಕಾಲದಲ್ಲೂ, ಮಹಾವೀರನ ಕಾಲದಲ್ಲೂ, ಬಸವಣ್ಣನ ಕಾಲದಲ್ಲೂ ಇದ್ದರು. ಇಂಥವರನ್ನು ಚರಿತ್ರೆಯುದ್ದಕ್ಕೂ ಟೀಕಿಸಲಾಗಿದೆ, ಲೇವಡಿ ಮಾಡಲಾಗಿದೆ. ಇವರು ಬರೀ ಡಾಂಬಿಕರು, ದುಡಿಯಲು ಹೆದರುವ ಮೈಗಳ್ಳರು. ಜೀವನೋಪಾಯಕ್ಕೆ ಸುಲಭವಾದ ಮಾರ್ಗವನ್ನು ಹುಡುಕಿಕೊಂಡವರು. ಇಂಥವರು ವರ್ತಮಾನದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಧಾರ್ಮಿಕ ಕ್ಷೇತ್ರಗಳಲ್ಲಿ ಇವರು ಪೀಡಕರಂತೆ ಕಾಡುತ್ತಾರೆ. 'ಧಾನ ಧರ್ಮ ಮಾಡಿದರೆ ಪುಣ್ಯ ಬರುತ್ತದೆ' –ಎಂಬ ಜನರ ಮೌಢ್ಯವನ್ನು ಇವರು ಚೆನ್ನಾಗಿ ಬಳಸಿಕೊಳ್ಳುತ್ತಾರೆ.

ವರ್ತಮಾನದ ಭಿಕ್ಷುಗಳು ನಾನಾ ರೂಪದಲ್ಲಿ ಅವತಾರವೆತ್ತಿದ್ದಾರೆ. ಸಮಾಜ ಸುಧಾರಕರ ರೀತಿ, ದೇವ ಮಾನವರ ರೀತಿ, ರಾಜಕಾರಣಿಗಳ ರೀತಿ– ಹೀಗೆ ಅವರ ಅವತಾರಗಳು ಬೆಳೆಯುತ್ತಲೇ ಇರುತ್ತವೆ. ಇಂಥ ಭಿಕ್ಷುಗಳಿಗೆ ಹಿಂಗದ ಬಾಯಾರಿಕೆ! ಎಷ್ಟು ತಿಂದರೂ ಹಸಿವು! ಇದು ಭೋಗದ ಹಸಿವು. ಭಿಕ್ಷುವಿನ ಗಮ್ಯ, ಗುರಿಗಳಿಗೆ ವಿರುದ್ಧವಾದ ಮಾರ್ಗ. ಇಂಥವರು ಈ ಬಗೆಯ ಭಿಕ್ಷೆ ಬೇಡಿಯೇ ಕೋಟ್ಯಾಧಿಪತಿಗಳಾಗುತ್ತಾರೆ. ಭೋಗ ಸುಖದ ಮರೀಚಿಕೆಯಲ್ಲಿ ಮುಳುಗಿ ತೇಲುತ್ತಾರೆ. ಜನ ವಂಚನೆಯ ವರ್ತುಲದಲ್ಲಿ ಸಿಲುಕಿ ನಾಶವಾಗುತ್ತಾರೆ. ಇಂಥವರೆ ನಿಜಕ್ಕೂ ಸಮಾಜದಲ್ಲಿ ದಂಡಪಿಂಡಗಳಂತೆ ಬದುಕಿ, ಅದನ್ನು ಟೊಳ್ಳು ಮಾಡುವ ಜನ!

ವ್ಯಕ್ತಿಗೆ ಹಸಿವು ಬಾಯಾರಿಕೆಗಳಿರಬೇಕು; ಅದು ಸಹಜ ಕ್ರಿಯೆ. ಅದು ಸಹಜ ನೈಸರ್ಗಿಕ ಪ್ರವೃತ್ತಿಯೂ ಹೌದು. ಆದರೆ ಅದೇ ಪ್ರಧಾನ ವೃತ್ತಿಯಾಗಬಾರದು. ವ್ಯಕ್ತಿ ಬಕಾಸುರನಲ್ಲ. ಅವನು ಬಕಾಸುರನಾದರೆ ಅವನಿಗಾದ ಅಂತ್ಯವನ್ನೇ ಕೊನೆಗೆ ಕಾಣಬೇಕಾಗುತ್ತದೆ. ಜಗತ್ತಿನ ಚರಿತ್ರೆಯಲ್ಲಿ ಇಂಥ ಬಕಾಸುರರನ್ನು ಸಹನೆ ಮೀರಿದ ಸಮಾಜ ತಿಂದು ನೊಣೆದಿದೆ. ಆದರೂ ಇಂಥವರ ಹಸಿವು ಬಾಯಾರಿಕೆಗಳು ಕಡಿಮೆಯಾಗಿಲ್ಲ. ಚರಿತ್ರೆಯಿಂದ ಪಾಠ ಕಲಿತಿಲ್ಲ.

ನಮಗೆಂಥ ಹಸಿವು ಬಾಯಾರಿಕೆಗಳಿರಬೇಕೆಂಬುದಕ್ಕೆ ಗೌತಮ ಬುದ್ಧ ಶ್ರೇಷ್ಠ ಮಾದರಿಯಾಗುತ್ತಾನೆ. ಅವನು ಗತಿಯಿಲ್ಲದೆ ಭಿಕ್ಷುವಾದವನಲ್ಲ; ಹೊಟ್ಟೆಪಾಡಿಗಾಗಿ ತಿರುಕನಾದನಲ್ಲ. ಅವನ ಹಸಿವು ಬಾಯಾರಿಕೆಗಳು ಉದಾತ್ತವಾದ ಆಶಯ ಮತ್ತು ಗುರಿಯನ್ನು ಹೊಂದಿದ್ದವು. ಜಗದ ನೋವು ದುಃಖಗಳ ಕಾರಣಗಳ ಮೂಲ ಶೋಧಿಸಿ, ಪರಿಹಾರ ಕಂಡುಹಿಡಿಯಲು ಶಪಥ ಮಾಡಿ ಮನೆಯಿಂದ ಹೊರಟ– ಅದೂ ರಾತ್ರಿಯ ಹೊತ್ತು. ರಾತ್ರಿಯಿಂದ ಹಗಲಿಗೆ, ಕತ್ತಲೆಯಿಂದ ಬೆಳಕಿಗೆ! ಅವನ ತ್ಯಾಗವಾದರೂ ಎಂಥದ್ದು? ಅವನ ಹಸಿವು ಬಾಯಾರಿಕೆಗಳು ಎಷ್ಟು ತೀವ್ರವಾಗಿದ್ದವು? ಆ ತೀವ್ರತೆ, ತುಡಿತ ಅವನನ್ನು ಅವನ ರಾಜ್ಯ, ಅರಮನೆ, ಭೋಗ, ಸುಂದರವಾದ ಪತ್ನಿ, ಮೋಹದ ಮಗು– ಎಲ್ಲದರಿಂದ ದೂರ ಮಾಡಿದವು. ಇದಕ್ಕೆ ಬೇಕಾದದ್ದು ಸಾಮಾಜಿಕ ಬದ್ಧತೆ, ಪ್ರೀತಿ, ದೃಢ ನಿರ್ಧಾರ. ಎಲ್ಲ ತೆರನ ಸುಖದ ಮಧ್ಯೆ ಇದ್ದು, ಅದನ್ನು ತ್ಯಾಗ ಮಾಡಲು ಅವನನ್ನು ಗಟ್ಟಿಗೊಳಿಸಿದ್ದವು. ನಡುರಾತ್ರಿ ಕತ್ತಲೆಯಲ್ಲಿ ಅವನು ಕಿತ್ತಿಟ್ಟ ಒಂದೊಂದು ಹೆಜ್ಜೆಯೂ ಮುಂದಿನ ಚರಿತ್ರೆಯನ್ನು ಸೃಷ್ಟಿಸಿದವು. ಅವನೊಬ್ಬ ಮಹಾಭಿಕ್ಷು!

■ ಶಿಕಾಕು

# ಮಾತೇ ಮುತ್ತು

★ ಜಗತ್ತಿನ ಮಹಾ ಕವಿಗಳನ್ನು ಸಾಲಾಗಿ ನಿಲ್ಲಿಸಿ ನೋಡಿದರೆ ಗುಟ್ಟು ರಟ್ಟಾಗುತ್ತದೆ! 'ಒಬ್ಬನ ಕೈ ಮತ್ತೊಬ್ಬನ ಜೇಬಿನಲ್ಲಿ!' ಎಂಬ ಜಾಣ್ಣುಡಿಯಲ್ಲಿ ಎಷ್ಟೊಂದು ಸತ್ಯವಿದೆ ಎಂದು ಅರ್ಥವಾಗುತ್ತದೆ.

–ಕುವೆಂಪು

★ ಅಲ್ಪಸ್ವಲ್ಪವಾದರೂ ಬುದ್ಧಿ ಸ್ಥಿಮಿತ ಇಲ್ಲದವನೇ ಕವಿ ಆಗಬಲ್ಲ! ಕಾವ್ಯ ಮೆಚ್ಚಿಕೊಳ್ಳಬಲ್ಲ!

–ಲಾರ್ಡ್ ಮೆಕಾಲೆ

★ ವಾಸ್ತವವಾಗಿ ಕವಿತೆ ಬದುಕಿನ ಮುಂದೆ ಬಹಳ ಕ್ಷುಲ್ಲಕ ಪದಾರ್ಥ. ಆದರೆ ನೋಡಿ– ಕವಿಯಂಥ ಅಹಂಕಾರಿ ಲೋಕದಲ್ಲೆ ಮತ್ತೊಬ್ಬನಿಲ್ಲ! ಇದು ನಮ್ಮ ದುರಂತ.

–ಸಿಪಿಕೆ

★ ಕೆಲವನ್ನು ಕೊಟ್ಟು ಇಟ್ಕೋಬೇಕು, ಕೆಲವನ್ನು ಕೊಟ್ಟು ಕಳ್ಕೋಬೇಕು.

–ಮಾಸ್ಟರ್ ಹಿರಣ್ಣಯ್ಯ

★ ಎದುರಾಳಿಯನ್ನು ಹೊಡೆದು ಉರುಳಿಸುವವನು ವೀರನಾಗಲಾರ. ಕೋಪ ಬಂದಾಗ ಸಹನೆ ತಪ್ಪಿ ನಡೆಯದವನೇ ನಿಜವಾದ ವೀರ.

–ಮಹಮದ್ ಪೈಗಂಬರ್

★ ಡ್ರಾಯಿಂಗ್ ಎಂದರೆ ಒಬ್ಬ ಕಲಾವಿದನನ್ನು ಅರಿತುಕೊಳ್ಳುವುದು.

–ಆರ್.ಎಂ.ಹಡಪದ

★ ಕಾವ್ಯರಸದಲ್ಲಿ ಮಿಂದ ಮನಸ್ಸನ್ನು ಪನ್ನೀರಿನಲ್ಲಿ ಅದ್ದಿದ ವಸ್ತ್ರಕ್ಕೆ ಹೋಲಿಸಬಹುದು. ಒಣಗಿದ ಮೇಲೂ ಅದರಲ್ಲಿ ಪರಿಮಳ ಉಳಿದಿರುತ್ತದೆ. ಕಾವ್ಯವನ್ನು ಓದಿದ ನಂತರ ನಾವೇ ಹೊಸ ಮನುಷ್ಯರಾಗುತ್ತೇವೆ.

–ತೀ.ನಂ.ಶ್ರೀ.

★ ಸಾಮೂಹಿಕ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಾಗಿರುವ ಪರಸ್ಪರ ಅವಲಂಬನದ ಅರಿವಿನಿಂದ ಮಾತ್ರ ಜನರಲ್ಲಿ ಭ್ರಾತೃತ್ವ ಬೆಳೆಯಲು ಸಾಧ್ಯ.

–ಬಿ.ಆರ್.ಅಂಬೇಡ್ಕರ್

★ ಕಾಲೇಜು ವಿದ್ಯೆಯ ಒಂದು ಲಾಭವೆಂದರೆ ವಿದ್ಯಾರ್ಥಿಗಳಿಗೆ ಅದು ಎಷ್ಟು ನಿಷ್ಪ್ರಯೋಜಕ ಎಂದು ತೋರಿಸುವುದೇ.

–ಎಮರ್‌ಸನ್

★ ಸುಮ್ಮನೇ ಕೂರಬೇಡಿ. ವ್ಯಕ್ತಿ ಅಚೇತನವಾಗಿ ಕುಳಿತುಬಿಟ್ಟರೆ ಬಹಳ ಬೇಗ ಮುದುಕನಾಗಿಬಿಡುತ್ತಾನೆ. ಆಗ ರೋಗಗಳು ಅವನ ಮೇಲೆ ಸವಾರಿ ಮಾಡುತ್ತವೆ.

–ಮುನಿಶ್ರೀ ತರುಣ ಸಾಗರ್ ಜಿ

★ ಕೀರ್ತಿ ನೀರಿನಲ್ಲಿಯ ಅಲೆಯಂತೆ; ದೊಡ್ಡದಾಗುತ್ತಲೇ ಇರುತ್ತದೆ; ಕಡೆಗೆ ಮಾಯವಾಗುತ್ತದೆ.

–ಶೇಕ್ಸ್‌ಪಿಯರ್

★ ಯಶಸ್ಸು ಒಂದು ನದಿಯಂತೆ: ಪೊಳ್ಳಾದುದನ್ನು ತೇಲಿಸುತ್ತದೆ; ಭಾರವಾದುದನ್ನು ಮುಳುಗಿಸುತ್ತದೆ.

–ಫ್ರಾನ್ಸಿಸ್ ಬೇಕನ್